# MYSORE LEGISLATIVE ASSEMBLY

THIRTY-NINTH DAY

*Monday, 22nd June 1964.*

The House met in the Assembly Hall, Vidhana Soudha, Bangalore, at Thirty Minutes past Twelve of the Clock.

MR. SPEAKER (SRI B. VAIKUNTA BALIGA, B.A., B.L.) in the chair.

## STARRED QUESTIONS

**(to which oral answers were given)**

### Restoration of Tanks in Bidar District.

*Q.—419. Sri S. BHIMANNA (Bhalki).—

Will the Government be pleased to state :—

(*a*) the number and names of the tanks in Bidar district that require restoration ;

(*b*) the names of the tanks that are restored during the past 3 years in the district (talukwise information may be given) ?

*A.—Sri ALUR HANUMANTHAPPA (Deputy Minister for Minor Irrigation).—

(*a*) 23 tanks as per the list (A) given below.

(*b*) *Vide* list (B) given below.

LIST 'A'

Names of Minor Irrigation Works which require restoration :

| | | | |
|---|---|---|---|
| 1 | Halliperga tank | 13 | Sonakera tank |
| 2 | Andur Wadi tank | 14 | Hallikhed tank |
| 3 | Vilaspur tank | 15 | Markhal tank |
| 4 | Chor Talab Mudhole (B) | 16 | Kodembal tank |
| 5 | Sikandrapur Wadi tank | 17 | Ambesangvi tank |
| 6 | Janawada East tank | 18 | Nawbad tank |
| 7 | Chatnalli tank | 19 | Bannahalli tank |
| 8 | Chinkera tank | 20 | Jalasingi tank |
| 9 | Sindhanakeri tank | 21 | Chikli Janawada tank |
| 10 | Kamalnagar tank | 22 | Dhumansur tank |
| 11 | Aliabad anicut | 23 | Malsapur tank |
| 12 | Babji Nagoor tank | | |

(SRI ALUR HANUMANTHAPPA)

LIST 'B'

Names of tanks restored since 1960-61 in Bidar Division.

**Name of Taluka**

*Bidar Taluka* :

1 Malkapur tank 2 Andur tank

*Humnabad Taluka* :

1 Gaon Talab Talbhog 2 Tiprant tank Kalyani

*Aurad Taluka* :

1 Deshmukh tank, Aurad village.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆಯಲ್ಲಿ ಜೀರ್ಣೋದ್ಧಾರವಾಗಬೇಕಾಗಿರುವ ಕೆರೆಗಳ ಕೆಲಸ ಯಾವ ಘಟ್ಟದಲ್ಲಿದೆ ಮತ್ತು ಎಷ್ಟು ಹಣ ಖರ್ಚಾಗಿದೆ ?

† ಶ್ರೀ ಆಲೂರು ಹನುಮಂತಪ್ಪ.—ನುಮಾರು 23 ಕೆರೆಗಳೆಂದು ಅಂಥಾಜಾಗಿದೆ, ಬೇರೆಬೇರೆ ಘಟ್ಟದಲ್ಲಿವೆ, ಕೆಲವು ಅಂದಾಜಾಗಿವೆ ಮತ್ತೆ ಕೆಲವು ಅಂದಾಜುಗಳು ಪರಿಶೀಲನೆಯೆಲ್ಲಿವೆ ಮತ್ತೆ, ಕೆಲವು ಮಂಜೂರಾಗುವ ಘಟ್ಟದಲ್ಲಿವೆ.

ಶ್ರೀ ಎನ್. ಭೀಮಣ್ಣ.—ಪ್ರತಿ ತಾಲ್ಲೂಕಿನಲ್ಲಿಯೂ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಜೀರ್ಣೋಧ್ಧಾರವಾಗಬೇಕಾಗಿರುವುದನ್ನು ಕೇಳಿದ್ದಿರಿ ಅದನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಭೀಮಣ್ಣ.—ಭಾಲ್ಕಿ ತಾಲ್ಲೂಕಿನಲ್ಲಿ ಎಷ್ಟಾಗಿವೆ ?

ಶ್ರೀ ಆಲೂರು ಹನುಮಂತಪ್ಪ.—ಬೇರೆ ತಾಲ್ಲೂಕುಗಳ ವಿವರ ಇಲ್ಲ, ಬೀದರ್, ಹುಮ್ನಾಬಾದು ಮತ್ತು ಜಿರಾದ್ ತಾಲ್ಲೂಕುಗಳ ವಿವರವನ್ನು ಕೊಟ್ಟಿದೆ.

ಶ್ರೀ ಎನ್. ಭೀಮಣ್ಣ.—ಭಾಲ್ಕಿ ತಾಲ್ಲೂಕಿನ ಕೆರೆಗಳ ಅಂದಾಜಾಗಿದೆಯೆ ? ಹಾಗಿದ್ದರೆ ಎಷ್ಟಕ್ಕೆ ಅಂದಾಜಾಗಿದೆ ?

ಶ್ರೀ ಆಲೂರು ಹನುಮಂತಪ್ಪ.—ಪಟ್ಟಿಯಲ್ಲಿ ಕೊಟ್ಟಿರುವ ಕೆಲಸಗಳೆಲ್ಲ ಅದೂ ಬರಬಹುದೆಂದು ತಿಳಿದುಕೊಂಡಿದ್ದೇನೆ, ತಾಲ್ಲೂಕುವಾರು ವಿವರಗಳು ನನ್ನಲ್ಲಿಲ್ಲ.

ಶ್ರೀ ಎನ್. ಭೀಮಣ್ಣ.—ಬೇರೆ ತಾಲ್ಲೂಕುಗಳಲ್ಲಿ ಇದುವರೆಗೂ ಒಂದು ಕೆರೆ ಕೂಡ ಜೀರ್ಣೋದ್ಧಾರವಾಗಿಲ್ಲದಿರಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಕೆಲವು ತಾಲ್ಲೂಕುಗಳಲ್ಲಿ ಆಗಿರುವುದನ್ನು ಕೊಟ್ಟಿದ್ದೇವೆ, ಇನ್ನೂ 23 ಕೆರೆಗಳ ಕೆಲಸ ಆಗಬೇಕಾಗಿದೆ ; ಮಾಡುತ್ತೇವೆ.

ಶ್ರೀ ಎನ್. ಭೀಮಣ್ಣ.—ಯಾವ ತಾಲ್ಲೂಕುಗಳಲ್ಲಿ ಕಾಂಗ್ರೆಸ್‌ನವರಿಗೆ ಜನರು ಮತ ಕೊಟ್ಟಿಲ್ಲವೋ ಅಲ್ಲಿ ಇದನ್ನು ಮಾಡಬಾರದೆಂಬುದು ಸರ್ಕಾರದ ಉದ್ದಿಶ್ಯವೇ ?

ಶ್ರೀ ಆಲೂರು ಹನುಮಂತಪ್ಪ.—ಹಾಗಲ್ಲ ಕೆಲವು ಒಡೆದು ಹೋಗಿರುವ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದೆ, ಅದಕ್ಕೆ ಭೂಮಿಯನ್ನು ಅಕ್ವೈರ್ ಮಾಡಬೇಕಾಗುತ್ತದೆ, ಆದಕ್ಕೆ ಕಾಲ ಬೇಕಾಗುತ್ತದೆ. ಆದರಿಂದ ಸ್ವಲ್ಪ ತಡವಾಗುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ಈ 23 ಕೆರೆಗಳಲ್ಲಿ ಈ ವರ್ಷ ಎಷ್ಟು ಕೆರೆಗಳನ್ನು ಜೀರ್ಣೋದ್ಧಾರ ಮಾಡಿ ಮುಗಿಸುತ್ತೀರಿ ?

ಶ್ರೀ ಆಲೂರು ಹನುಮಂತಪ್ಪ.—ಹೊಸ ಕೆಲಸಗಳಿಗೆ ಕೇಂದ್ರದಿಂದ ಹೆಚ್ಚು ಹಣವನ್ನು ಕೇಳಿದ್ದೇವೆ, ಅದು ಬರುತ್ತದೆಂಬ ನಿರೀಕ್ಷೆಯಿದೆ, ಆದಷ್ಟು ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಮಾಡಬೇಕೆಂದು ನೋಡಿ ಅದಕ್ಕೊಂದು ಮಾನ್ಸರ್ ಪ್ಲ್ಯಾನ್ ತಯಾರುಮಾಡಿ, ಇಷ್ಟು ಕಾಲದಲ್ಲಿ ಎಲ್ಲವನ್ನೂ ಜೀರ್ಣೋದ್ಧಾರ ಮಾಡಬೇಕೆಂಬ ಕಾರ್ಯಕ್ರಮವಿದೆಯೇ ?

†Indicates that the remarks or speeches have not been revised by the member concerned

ಶ್ರೀ ಅಲೂರು ಹನುಮಂತಪ್ಪ.—ಇದೆ. ಬೀದರ್ ಒಂದು ಜಿಲ್ಲೆಯಲ್ಲಿ 32 ಕೆರೆಗಳಿವೆ, ಅವು ಜೀರ್ಣೋದ್ಧಾರವಾಗಬೇಕೆಂದಿದೆ. ಈಗಿನ ಪರಿಸ್ಥಿತಿಯಲ್ಲಿ ಮಾಸ್ಟರ್-ಪ್ಲಾನ್ ಪ್ರಕಾರ ದೇಶದ ಎಲ್ಲ ಕೆರೆಗಳನ್ನೂ ಜೀರ್ಣೋದ್ಧಾರ ಮಾಡಬೇಕಾದರೆ ಸುಮಾರು 20 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಈ ಮಾಸ್ಟರ್ ಪ್ಲಾನ್ ಮುದ್ರಣವಾಗುತ್ತಿದೆ; ನಮ್ಮ ರಾಜ್ಯದಲ್ಲಿ ಆಹಾರೋತ್ಪತ್ತಿಯನ್ನು ಹೆಚ್ಚಿಸಲು ಈ ಕೆರೆಗಳು ಬಹಳ ಅವಶ್ಯಕ, ತುರ್ತಾಗಿ ಇವುಗಳ ಕೆಲಸವನ್ನು ಮಾಡಬೇಕು, ಇದಕ್ಕಾಗಿ ಹಣವನ್ನು ಕೊಡಿ ಎಂದು ಕೇಂದ್ರದವರನ್ನು ಕೇಳುತ್ತಿದ್ದೇವೆ, ಅವರಿಂದ ಸಹಾಯ ಬರುವ ಆಶೆಯೂ ಇದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾಸ್ಟರ್-ಪ್ಲಾನನ್ನು ಸ್ಥಳಗಳಿಗೆ ಹೋಗಿ ನೋಡಿ ತಯಾರು ಮಾಡಿದ್ದಾರೊ ಅಥವಾ ಕಚೇರಿಯಲ್ಲಿ ಕುಳಿತು ನಕ್ಷೆ ನೋಡಿ ಮಾಡಿದ್ದಾರೊ ? ಪ್ರತ್ಯಕ್ಷವಾಗಿ ಸ್ಥಳಕ್ಕೆ ಹೋಗಿ ನೋಡಿ ಮಾಡದಿದ್ದರೆ ಅದು ಹೇಗೆ ಮಾಸ್ಟರ್‌ಪ್ಲಾನ್ ಆಗುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಪ್ರಪಂಚದಲ್ಲಿ ಯಾರ ವಿಚಾರದಲ್ಲಾದರೂ ಆ ಮಾನ್ಯ ಸದಸ್ಯರಿಗೆ ನಂಬಿಕೆ ಇದೆಯೆ ಎಂದು ಕೇಳಬೇಕಾಗಿದೆ.

---

## Misappropriation of Funds in Kanchanahally, Mallahally and Kallanakoppa Group Panchayats.

*Q.—440. Sri S. KARIYAPPA (Kanakapura).—

Will the Government be pleased to state :—

(*a*) to what extent the funds of (i) Kanchanahally, (ii) Mallahally and (iii) Kallanakoppa Group Panchayats have been misappropriated by the Chairman of the respective Panchayats ;

(*b*) whether assurance was not given by them on the floor of the House when a like question was put that they would take necessary action against the Chairman of those Panchayats ;

(*c*) the action taken according to this assurance :

(*d*) whether they or any concerned officer or officers have received any complaint from the villagers of Kanchanahalli to the effect that the Chairman has again misappropriated the Panchayat Funds ?

*A.*—Sri RAMAKRISHNA HEGDE (Minister for Development, Panchayat Raj and Co-operation).—

(*a*) Misappropriation to the extent of Rs. 1,030-13 nP. is reported in respect of the funds of the Kanchanahally Village Panchayat only.

(*b*) Yes.

(*c*) Misappropriation case has been referred to the Police.

(*d*) Yes.

ಶ್ರೀ ಎಸ್. ಕರಿಯಪ್ಪ.—ಕಂಚನಹಳ್ಳಿಯ ಪಂಚಾಯಿತಿಯಲ್ಲಿ ಮಾತ್ರ 1,030.13 ರೂಪಾಯಿಗಳವರೆಗೆ ದುರುಪಯೋಗವಾಗಿದೆ ಎಂದು ಉತ್ತರ ಕೊಡಲಾಗಿದೆ ಯಾರು ದುರುಪಯೋಗ ಮಾಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಪಂಚಾಯಿತಿಯ ಅಧ್ಯಕ್ಷರು.

ಶ್ರೀ ಎಸ್. ಕರಿಯಪ್ಪ.—ಹೀಗೆ ದುರುಪಯೋಗವಾಗಿದೆ ಎನ್ನುವುದನ್ನು ಬೆಳಕಿಗೆ ತಂದವರು ಯಾರು ?

ಶ್ರೀ ರಾಮಕೃಷ್ಣ ಹೆಗ್ಗಡೆ.— ಜನರಿಂದ ಆಪಾದನೆ ಬಂತು, ತನಿಖೆ ಮತ್ತು ಆಡಿಟ್ ಮಾಡಿಸಿದ ಮೇಲೆ ದುರುಪಯೋಗವಾಗಿದೆ ಎನ್ನುವುದು ಗೊತ್ತಾಯಿತು.

ಶ್ರೀ ಎಸ್. ಕರಿಯಪ್ಪ.—ಜನರು ಆಪಾದನೆಯನ್ನು ಸರಕಾರಕ್ಕೆ ಮಾಡಿದುದು ಯಾವಾಗ ?

ಶ್ರೀ ರಾಮಕೃಷ್ಣ ಹೆಗ್ಗಡೆ.—18-12-63ರಲ್ಲಿ.

ಅಧ್ಯಕ್ಷರು.—ಆ ಸಂಬಂಧವಾಗಿ ಚಾರ್ಜ್‌ಷೀಟ್ ಹಾಕಿರುವಂತೆ ಕಾಣುತ್ತದೆ; ಅದು ಸಬ್‌ಜುಡಿಸ್ ಆಗುತ್ತದೆ.